ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 27–12–2018**

## ಪತ್ರಿಕಾ ಆಮಂತ್ರಣ

1. Bengaluru Central University (BCU) in association with Lions Club International District 317F-region V
   "Igniting Minds – Job Fair 2018"

   **Inaugurate:**

   Shri Vajubhai Vala, Hon'ble Governor of Karnataka.

   Date: 28-12-2018, Friday, Time: 10.15 AM.
   Place: Jnana Jyothi Auditorium, Central College Campus, Palace Road, Bengaluru.

2. ಸರ್ಕಾರಿ ದಂತ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ವಜ್ರ ಮಹೋತ್ಸವ ಉದ್ಘಾಟನೆ ಸಮಾರಂಭ:

   ಮುಖ್ಯ ಅತಿಥಿ:
   ಹೆಚ್. ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

   **ಗೌರವಾನ್ವಿತ ಅತಿಥಿ ಹಾಗೂ ಸ್ಮರಣ ಸಂಚಿಕೆಯ ಬಿಡುಗಡೆ:**
   ಡಿ.ಕೆ. ಶಿವಕುಮಾರ್,
   ಜಲಸಂಪನ್ಮೂಲ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು.

   **ಅಧ್ಯಕ್ಷತೆ:**
   ಬಿ.ಝಡ್. ಜಮೀರ್ ಅಹ್ಮದ್ ಖಾನ್,
   ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಅಲಸಂಖ್ಯಾತ ಮತ್ತು ವಕ್ಫ್ ಸಚಿವರು.

   ದಿನಾಂಕ: 28–12–2018, ಶುಕ್ರವಾರ, ಸಮಯ: ಬೆಳಿಗ್ಗೆ 11–00 ಗಂಟೆಗೆ

ಸ್ಥಳ: ಡಾ. ಎಸ್. ರಾಮಚಂದ್ರ ಸಭಾಂಗಣ, ಸರ್ಕಾರಿ ದಂತ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

**3. ಕಾರಾಗೃಹದ ಖೈದಿಗಳಿಗೆ ಆತ್ಮಹತ್ಯೆ ಮತ್ತು ಒತ್ತಡ ನಿರ್ವಹಣೆ ಕುರಿತ ಕಾರ್ಯಕ್ರಮ:**

**ಉದ್ಘಾಟನೆ:**

**ಸುನೀಲ್‌ಕುಮಾರ್ ಸಿಂಗ್,**
**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ನಗರ ಜಿಲ್ಲೆ**

**ಅಧ್ಯಕ್ಷತೆ:**

**ಸೋಮಶೇಖರ್ ಎಂ.**
**ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ ಪರಪ್ಪನ ಅಗ್ರಹಾರ**

**ದಿನಾಂಕ: 28-12-2018 ಶುಕ್ರವಾರ ಸಮಯ: ಬೆಳಿಗ್ಗೆ 11-00 ಗಂಟೆಗೆ**

**ಸ್ಥಳ: ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಬೆಂಗಳೂರು**

**4. ಪತ್ರಿಕಾಗೋಷ್ಠಿ:**

ಎ.ಟಿ. ರಾಮಸ್ವಾಮಿ, ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ ಇವರಿಂದ

ದಿನಾಂಕ: 28-12-2018, ಶುಕ್ರವಾರ, ಸಮಯ : ಮಧ್ಯಾಹ್ನ 1.30 ಗಂಟೆಗೆ

ಸ್ಥಳ: ಕೊಠಡಿ ಸಂಖ್ಯೆ 106, ಮೊದಲನೇ ಮಹಡಿ, ವಿಧಾನಸೌಧ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಜನವರಿ 2 ರಿಂದ 12 ರವರೆಗೆ

## ಕ್ಷಯ ರೋಗ ಆಂದೋಲನ

ಬೆಂಗಳೂರು, ಡಿಸೆಂಬರ್ 27, (ಕರ್ನಾಟಕ ವಾರ್ತೆ)

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಯ ರೋಗದ 5 ನೇ ಸುತ್ತಿನ ಪತ್ತೆ ಆಂದೋಲನವನ್ನು ಜನವರಿ 2 ರಿಂದ 12 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ: ಪ್ರಕಾಶ್ ಕೆ.ಎಸ್. ಅವರು ತಿಳಿಸಿದರು.

ಈ ಆಂದೋಲನದಲ್ಲಿ ಮುಖ್ಯವಾಗಿ ಮನೆ ಮನೆಗೆ ಭೇಟಿ ನೀಡುವುದರ ಮೂಲಕ ವ್ಯಕ್ತಿಗತ ರೋಗಲಕ್ಷಣ ಹಾಗೂ ರೋಗ ತಪಾಸಣೆ ಮಾಡಿ ಪತ್ತೆಯಾದ ಎಲ್ಲಾ ಕ್ಷಯರೋಗ ಪ್ರಕರಣ ಹಾಗೂ ಶಂಕಿತ ಕ್ಷ- ಕಿರಣ ಪ್ರಕರಣಗಳ ಕಫದ ಮಾದರಿಗಳನ್ನು ಉಚಿತವಾಗಿ ಪರೀಕ್ಷೆ ಮಾಡಲಾಗುವುದು

ಇಂದು ನಗರದ ಕಂದಾಯ ಭವನದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು ಕಳೆದ ಜನವರಿಯಿಂದ ಆರಂಭವಾಗಿರುವ ಕ್ಷಯ ರೋಗ ಪತ್ತೆ ಆಂದೋಲನ ಈಗಾಗಲೇ 4 ಹಂತಗಳನ್ನು ಮುಗಿಸಿದ್ದು ಮೊದಲನೇ ಆಂದೋಲನದಲ್ಲಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ 30 ಕ್ಷಯ ರೋಗಿಗಳನ್ನು ಪತ್ತೆ ಹಚ್ಚಲಾಗಿತ್ತು. ಎರಡನೇ ಸುತ್ತಿನ ಆಂದೋಲನದಲ್ಲಿ 99, ಮೂರನೇ ಸುತ್ತಿನ ಆಂದೋಲನದಲ್ಲಿ 106 ಹಾಗೂ ನಾಲ್ಕನೇ ಸುತ್ತಿನ ಆಂದೋಲನದಲ್ಲಿ 75 ಕ್ಷಯ ರೋಗಿಗಳನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

5 ನೇ ಹಂತದ ಆಂದೋಲನಕ್ಕೆ ಹೆಚ್ಚಿನ ಪ್ರಚಾರ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಚಲನಚಿತ್ರ ಮಂದಿರಗಳಲ್ಲಿ ಆಂದೋಲನ ಕುರಿತು ಪ್ರಚಾರ ಕೈಗೊಳ್ಳಲು ಕ್ರಮವಹಿಸಲು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಬೆಂಗಳೂರು ನಗರ ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿ ಡಾ: ಶ್ರೀನಿವಾಸ್ ಜಿ.ಎ. ಸೇರಿದಂತೆ ಅನೇಕ ಜಿಲ್ಲಾಮಟ್ಟದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಆಂದೋಲನದ ಪ್ರಚಾರ ಸಾಮಗ್ರಿಗಳನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದರು.

## ಸಚಿವರ ಪ್ರವಾಸ

ಬೆಂಗಳೂರು, ಡಿಸೆಂಬರ್ 27 , (ಕರ್ನಾಟಕ ವಾರ್ತೆ)

ಕೃಷಿ ಸಚಿವ ಎನ್. ಹೆಚ್. ಶಿವಶಂಕರ ರೆಡ್ಡಿ ಅವರು ಡಿಸೆಂಬರ್ 31 ರಂದು ಧಾರವಾಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅದೇ ದಿನ ಸಂಜೆ ನಗರಕ್ಕೆ ಹಿಂದಿರುಗಲಿದ್ದಾರೆ.

## ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ

ಬೆಂಗಳೂರು, ಡಿಸೆಂಬರ್ 27 , (ಕರ್ನಾಟಕ ವಾರ್ತೆ)

ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2019-20 ನೇ ಸಾಲಿಗೆ ಜಿಲ್ಲಾ ರಾಜ್ಯ ಕ್ರೀಡಾ ಶಾಲೆ/ವಸತಿ ನಿಲಯಗಳ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ಜನವರಿ ದಿನಾಂಕ: 7 ರಿಂದ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಆಯೋಜಿಸಲಾಗಿದೆ. 4ನೇ ತರಗತಿ (ದಿನಾಂಕ: 01-06-2019 ಕ್ಕೆ 11 ವರ್ಷ ಮೀರಿರಬಾರದು) 7ನೇ ತರಗತಿ (ದಿನಾಂಕ: 01-06-2019 ಕ್ಕೆ 14 ವರ್ಷ ಮೀರಿರಬಾರದು) ಹಾಗೂ 10 ನೇ ತರಗತಿಯಲ್ಲಿ (ದಿನಾಂಕ:01-06-2019 ಕ್ಕೆ 18 ವರ್ಷ ಮೀರಿರಬಾರದು) ವ್ಯಾಸಜಂಗ ಮಾಡುತ್ತಿರುವ ಬಾಲಕ/ಬಾಲಕಿಯರುಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

07-01-2019 ರಂದು ಆನೇಕಲ್ ತಾಲ್ಲೂಕು ಕ್ರೀಡಾಂಗಣದಲ್ಲಿ ದಿನಾಂಕ 08-01-2019 ರಂದು ಬೆಂಗಳೂರು ದಕ್ಷಿಣ ತಾಲ್ಲೂಕು ಹೊನಗನಹಟ್ಟಿ ತಾಲ್ಲೂಕು ಕ್ರೀಡಾಂಗಣಲದಲ್ಲಿ, ದಿನಾಂಕ: 09-01-2019 ರಂದು ಡಿ.ಜಿ. ಹಳ್ಳಿ ತಾಲ್ಲೂಕು ಕ್ರೀಡಾಂಗಣದಲ್ಲಿ, ದಿನಾಂಕ: 10-01-2019 ರಂದು ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್. ಪುರಂ ಸರ್ಕಾರಿ ಶಾಲೆ ಆವರಣದಲ್ಲಿ, ದಿನಾಂಕ: 11-01-2019 ರಂದು ಯಲಹಂಕ ಸರ್ಕಾರಿ ಶಾಲೆ ಆವರಣದಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ ಶ್ರೀ ಪ್ರಕಾಶ್ ಜೂಡೋ ತರಬೇತುದರರು-9980649304, ಶ್ರೀ ಚಿನ್ನಪ್ಪ ಟೆನ್ನೀಸ್ ತರಬೇತುದಾರರು -9844173168 ಶ್ರೀ ಮಂಜುನಾಥ್ ಲಮಾಣಿ ಫಿಟ್‌ನೆಸ್ ಟ್ರೇನರ್-9731823039 ಶ್ರೀ ಸೌರವಗುಹ ಬಾಕ್ಸಿಂಗ ತರಬೇತುದಾರರು-9038357222 ಶ್ರೀ ರವಿ ಅಣ್ಣಪ್ಪ ಅಥ್ಲೆಟಿಕ್ಸ್ ತರಬೇತುದಾರರು-9900931136, ಶ್ರೀ ಅನೂಪ್ ಎ. ವೈ. ಬಾಸ್ಕೆಟ್‌ಬಾಲ್ ತರಬೇತುದಾರರು-9448000563 ಅಥವಾ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಂಗಳೂರು ನಗರ ಜಿಲ್ಲೆ ಶ್ರೀ ಕಂಠೀರವನ ಕ್ರೀಡಾಂಗಣ ಸಂಕೀರ್ಣ ಮೊ.ಸಂ. 9480886545 ಇವರನ್ನು ಖುದ್ದಾಗಿ ಅಥವಾ ಆ ಮೇಲ್ಕಂಡ ತರಬೇತುದಾರರನ್ನು ದೂರವಾಣಿಯ ಮೂಲಕ ಸಂಪರ್ಕಿಸಬಹುದಾಗಿದೆ.

## ಮಾಜಿ ಸೈನಿಕರ ಅವಲಂಬಿತರಿಗೆ ವಾಯುಯಾನಕ್ಕಾಗಿ ಗುರುತಿನ ಚೀಟಿ

ಬೆಂಗಳೂರು, ಡಿಸೆಂಬರ್ 27 , (ಕರ್ನಾಟಕ ವಾರ್ತೆ)

ಜಂಟಿ ನಿರ್ದೇಶಕರು, ಸೈನಿಕ ಮತ್ತು ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ, ಬೆಂಗಳೂರು ನಗರ ಇವರ ಕಾರ್ಯಾಲಯದಿಂದ, ಬೆಂಗಳೂರು ನಗರ ಜಿಲ್ಲೆಯ ಮಾಜಿ ಸೈನಿಕರ ಅವಲಂಭಿತರಿಗೆ ವಾಯುಯಾನ ರಿಯಾಯಿತಿ ಸಲುವಾಗಿ ಅವಲಂಬಿತರ ಗುರುತಿನ ಚೀಟಿಯನ್ನು ನೀಡಲಾಗುತ್ತದೆ. ಸದರಿ ಗುರುತಿನ ಚೀಟಿಯು ವಿದ್ಯಾಭ್ಯಾಸ ಹಾಗೂ ಉದ್ಯೋಗ ಮೀಸಲಾತಿಗಾಗಿ ಅನ್ವಯಿಸುವುದಿಲ್ಲವಾಗಿದೆ. ಈ ಗುರುತಿನ ಚೀಟಿಗಳನ್ನು ಮಾಜಿ ಸೈನಿಕರ ತಂದೆ, ತಾಯಿ, ಪತ್ನಿ ಮತ್ತು ಅಪ್ರಾಪ್ತ ವಯಸಕ ಮಕ್ಕಳಿಗೆ ಪಡೆಯಹುದಾಗಿದೆ. ವಾಯುಯಾನ ರಿಯಾಯಿತಿಗಾಗಿ ಅವಲಂಬಿತರ ಗುರುತಿನ ಚೀಟಿಗಳನ್ನು ಪಡೆಯಲು ಇಚ್ಛಿಸುವ ಮಾಜಿ ಸೈನಿಕರು ಈ ಕೆಳಗಿನ ದಾಖಲೆಗಳೊಂದಿಗೆ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ.

ಅರ್ಜಿ ನಮೂನೆ, ಮಾಜಿ ಸೈನಿಕರ/ಮೃತ ಮಾಜಿ ಸೈನಿಕರ ಪತ್ನಿಯರ ಗುರುತಿನ ಚೀಟಿ, ಸೇನಾ ಬಿಡುಗಡೆ ಪ್ರಮಾಣ ಪತ್ರ/ರೆಕಾರ್ಡ್ ಆಫ್ ಸರ್ವಿಸ್, ಪಿಂಚಣಿ ಮೂಲಕ ಪುಸ್ತಕ/ಪಿಪಿಒ.. ಶಾರ್ಟ್ ಸರ್ವಿಸ್ ಅಧಿಕಾರಿಗಳಾಗಿದ್ದಲ್ಲಿ ಮೂಲ ರೀಲೀಸ್ ಆರ್ಡರ್, ಟರ್ಮಿನಲ್ ಗ್ರಾಚ್ಯುಯಿಇ ಪತ್ರ, ಅವಲಂಬಿತರ ಆಧಾರ್ ಕಾರ್ಡ್, ಪಾಸ್ ಪೋರ್ಟ್/ಸ್ಟಾಂಪ್ ಸೈಜಿನ ಕನ್ನಡಕ ಟೋಪಿ ಇಲ್ಲದ ನೀಲಿ ಹಿನ್ನೆಲೆಯ ಫೋಟೋ ಪ್ರಿ –02, ತಹಶೀಲ್ದಾರರಿಂದ ಪಡೆದ ಆದಾಯ ಪ್ರಮಾನ ಪತ್ರ, ಅವಲಂಬಿತ ತಂದೆ/ತಾಯಿಗೆ, ಪಾರ್ಟ್ 2 ಆರ್ಡರ್ ಪ್ರತಿ – ಸೇನಾ ಬಿಡುಗಡೆ ಪ್ರಮಾಣ ಪತ್ರದಲ್ಲಿ ಹೆಸರಿಲ್ಲದಿದ್ದಲ್ಲಿ. ನಿರಾಕ್ಷೇಪಣಾ ಪತ್ರ ಅನ್ವಯವಾಗುವಂತೆ, ತಹಶೀಲ್ದಾರದಿಂದ ಪಡೆದ ಅವಿವಾಹಿತ/ನಿರುದ್ಯೋಗ ಪ್ರಮಾಣ ಪತ್ರ ಅವಲಂಬಿತ ಮಕ್ಕಳಿಗೆ.

ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಗಾಗಿ ದೂರವಾಣಿ ಸಂಖ್ಯೆ 080 2585119 ಹಾಗೂ ಮಿಂಚಂಚೆ sainikblr@rediffmail.com ನ್ನು ಸಂಪರ್ಕಿಸಬಹುದಾಗಿದೆ. ಸಾಫ್ಟ್ ಪ್ರತಿಗಳನ್ನು director.dipr_ka@gov.in ಇಮೇಲ್ ಐಡಿಗೆ ಕಳುಹಿಸಲಾಗಿದೆ.

## ಪರಿಶಿಷ್ಟ ಜಾತಿಯ ಪತ್ರಿಕೋದ್ಯಮ ಪದವಿ/ಸ್ನಾತಕೋತ್ತರ ಪದವೀಧರರಿಂದ ಏಳು ತಿಂಗಳ ಅಪ್ರೆಂಟಿಷಿಪ್ ತರಬೇತಿಗಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ):**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ವತಿಯಿಂದ, 2018-19ನೇ ಸಾಲಿನ ಎಸ್‌ಸಿಎಸ್‌ಪಿ ಉಪಯೋಜನೆಯಡಿ, ಜಿಲ್ಲಾ ಕಛೇರಿಗಳಲ್ಲಿ ಕ್ಷೇತ್ರ ಪ್ರಚಾರ ಹಾಗೂ ಮಾಧ್ಯಮ ತರಬೇತಿ ನೀಡಲು, ಪತ್ರಿಕೋದ್ಯಮದಲ್ಲಿ ಪದವಿ/ ಸ್ನಾತಕೋತ್ತರ ಪದವಿ ಪಡೆದಿರುವ ಜಿಲ್ಲೆಯ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪತ್ರಿಕೋದ್ಯಮ ಅಪ್ರೆಂಟಿಷಿಪ್ ತರಬೇತಿಯು 07 ತಿಂಗಳ ಅವಧಿಯದ್ದಾಗಿರುತ್ತದೆ. ಮೆರಿಟ್ ಆಧಾರದ ಮೇಲೆ ಆಯ್ಕೆಯಾಗುವ ಇಬ್ಬರು ಅಭ್ಯರ್ಥಿಗಳಿಗೆ ತಿಂಗಳಿಗೆ ತಲಾ ರೂ.15,000/- ಸ್ಟೈಫಂಡ್‌ನ್ನು ಕರ್ನಾಟಕ ಮಾಧ್ಯ,ಮ ಅಕಾಡೆಮಿ ಮೂಲಕ ನೀಡಲಾಗುವುದು.

ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಪದವಿ/ಸ್ನಾತಕೋತ್ತರ ಪದವಿ ಪ್ರಮಾಣಪತ್ರ, ಜಾತಿ ಪ್ರಮಾಣ ಪತ್ರ, ಪಾಸ್ ಪೋರ್ಟ್ ಅಳತೆಯ 2 ಭಾವಚಿತ್ರ ಹಾಗೂ ಇನ್ನಿತರ ದಾಖಲೆಗಳನ್ನು ದ್ವಿಪ್ರತಿಯಲ್ಲಿ ಸಲ್ಲಿಸಲು **ಜನವರಿ 05** ಕೊನೆಯ ದಿನವಾಗಿದೆ.

ಆಸಕ್ತರು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಎರಡನೇ ಮಹಡಿ, ನಂ.17, ಭಗವಾನ್ ಮಹಾವೀರ ರಸ್ತೆ, (ಇನ್‌ಫೆಂಟ್ರಿ ರಸ್ತೆ) ಬೆಂಗಳೂರು-560001. ದೂರವಾಣಿ ಸಂಖ್ಯೆ : 080-22028058/22028059 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಉಪನಿರ್ದೇಶಕ ಡಿ.ಪಿ.ಮುರಳೀಧರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಿಂಚಣಿ ಅದಾಲತ್

**ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ):**

ರಕ್ಷಣಾ ಪರಿಶೋಧನೆ ಪ್ರಧಾನ ನಿಯಂತ್ರಕರು (PCDA Pension) ಅಲಹಾಬಾದ್, ಇವರು ಪಿಂಚಣಿ ಅದಾಲತ್ ನ್ನು ಕೊಡಗು ಜಿಲ್ಲೆಯ ಕೆಳಗಿನ ಕೊಡಗು ಸಮಾಜ, ಜನರಲ್ ತಿಮ್ಮಯ್ಯ ಸ್ಟೇಡಿಯಂ, ಹತ್ತಿರ, ಅಪ್ಪಯ್ಯಗೌಡ ರಸ್ತೆ, ಮಡಿಕೇರಿಯಲ್ಲಿ ದಿನಾಂಕ 03 ಮತ್ತು 04 ಜನವರಿ 2019 ರಂದು ನಡೆಸಲಿದ್ದಾರೆ. ರಕ್ಷಣಾ ಪಿಂಚಣಿ/ಕುಟುಂಬ ಪಿಂಚಣಿದಾರರು (ರಕ್ಷಣಾ ಸಿವಿಲಿಯನ್ ಪಿಂಚಣಿದಾರರು ಹಾಗೂ ರಕ್ಷಣಾ ಕಮಿಷನ್ಡ್ ಅಧಿಕಾರಿಗಳನ್ನು ಒಳಗೊಂಡಂತೆ) ತಮ್ಮ ಪಿಂಚಣಿಗೆ ಸಂಬಂಧಿಸಿದ ಅಹವಾಲುಗಳನ್ನು ಸಲ್ಲಿಸಿ, ಅದಾಲತ್‌ನಲ್ಲಿ ಭಾಗವಹಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಈ ನಿಟ್ಟಿನಲ್ಲಿ ಫಲಾನುಭವಿಗಳು ತಮ್ಮ ಅಹವಾಲುಗಳನ್ನು ನಿಗದಿತ ಅರ್ಜಿ ನಮೂನೆಯನ್ನು ಸಮೀಪದ ಸೈನಿಕ ಕಲ್ಯಾಣ ಇಲಾಖೆ, ಯುನಿಟ್ ಕ್ಯಾಂಟಿನ್, ಇಸಿಹೆಚ್‌ಎಸ್ ಪಾಲಿಕ್ಲಿನಿಕ್‌ಗಳಿಂದ ಪಡೆದುಕೊಂಡು ಅದಾಲತ್ ಕೋಶಾಧಿಕಾರಿಗಳಿಗೆ

ಮುಂಚಿತವಾಗಿ ಸಲ್ಲಿಸಲು ಕೋರಲಾಗಿದೆ. ಮಿಂಚಂಚೆ pensionadalt@gmail.com ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0532 2421873 09450613777 ನ್ನು ಸಂಪರ್ಕಿಸಬಹುದು.

ಎಸಿಬಿ ದಾಳಿ

ಬೆಂಗಳೂರು, ಡಿಸೆಂಬರ್ 27 (ಕರ್ನಾಟಕ ವಾರ್ತೆ):

ಬೆಂಗಳೂರು ನಗರ ನಿವಾಸಿಯೊಬ್ಬರು ಬೆಂಗಳೂರು ಪೂರ್ವ ತಾಲ್ಲೂಕು, ಕುಂದರಹಳ್ಳಿ ಗೇಟ್‌ನ ತೂಬರಹಳ್ಳಿಯ ಸರಣ್ಯ ಗ್ರೂಪ್ ರವರಿಂದ ನಿರ್ಮಾಣಗೊಂಡಿರುವ ಸರಣ್ಯ ಸೋಹನ್ ಅಪಾರ್ಟ್‌ಮೆಂಟ್‌ನ ಫ್ಲಾಟ್ ಒಂದನ್ನು ಖರೀದಿ ಮಾಡಿದ್ದು, ಶ್ರೀ.ಕಿರಣ್, ಜಿ.ಪಿ.ಎ ಹೋಲ್ಡರ್, ಸರಣ್ಯ ಸೋಹನ್ ಅಪಾರ್ಟ್‌ಮೆಂಟ್ ರವರು ರಿಜಿಸ್ಟರ್ ಮಾಡಿಸಲು ಬಿದರಹಳ್ಳಿ ಸಬ್–ರಿಜಿಸ್ಟ್ರಾರ್ ಕಛೇರಿಗೆ ಲಂಚದ ಹಣ ರೂ.27,000/– ನೀಡಬೇಕೆಂದು ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:27/12/2018 ರಂದು ಶ್ರೀ.ಕಿರಣ್, ಜಿ.ಪಿ.ಎ ಹೋಲ್ಡರ್ ರವರು ರೂ.27,000/– ಲಂಚದ ಹಣವನ್ನು ದೂರುದಾರರಿಂದ ಬಿದರಹಳ್ಳಿ ಸಬ್–ರಿಜಿಸ್ಟ್ರಾರ್ ಕಛೇರಿಯಲ್ಲಿ ಪಡೆದುಕೊಂಡಿದ್ದು, ಬೆಂಗಳೂರು ಗ್ರಾಮಾಂತರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಮಾಡಿದ್ದು, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

ಸಚಿವರ ಪ್ರವಾಸ

ಬೆಂಗಳೂರು, ಡಿಸೆಂಬರ್ 27, (ಕರ್ನಾಟಕ ವಾರ್ತೆ)

ಕಂದಾಯ ಮತ್ತು ಕೌಸಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಆರ್.ವಿ. ದೇಶಪಾಂಡೆ ಅವರು ಡಿಸೆಂಬರ್ 30 ರಿಂದ ಜನವರಿ 2 ರವರೆಗೆ ಬೆಳಗಾವಿ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮ ಹಾಗೂ ಸಭೆಗಳಲ್ಲಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.